ಖಾಸಗಿ ವಾಹನಗಳ ಪ್ರವೇಶವನ್ನೇ ನಿಷೇಧಿಸಲಾಗಿದೆ. ಬೆಟ್ಟದ ತಳಭಾಗದಿಂದ ಸಾರಿಗೆ ವಾಹನದಲ್ಲಿ ತೆರಳಿ ಪೂಜೆ ಸಲ್ಲಿಸಿ ಅದೇ ವಾಹನಗಳಲ್ಲಿ ವಾಪಸ್ ಬರುವ ವ್ಯವಸ್ಥೆ ಮಾಡಲಾಗಿದೆ. ಬೆಟ್ಟದಲ್ಲಿ ಜನದಟ್ಟಣೆ ಹೇಗಿರುತ್ತದೆ ಎಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೇ.

## ಮಹಿಷಾಸುರ ದರ್ಶನ

ಚಾಮುಂಡಿ ಬೆಟ್ಟಕ್ಕೆ ಕಾಲಿಡುತ್ತಿದ್ದಂತೆ ಮಹಿಷಾಸುರನ 'ಸುಂದರ' ಮೂರ್ತಿ ಸ್ವಾಗತಿಸುತ್ತದೆ. ಈ ಮೂರ್ತಿಯ ರೂಪವೇ ಒಂದು ರೀತಿಯಲ್ಲಿ ಆಕರ್ಷಕವಾಗಿದ್ದು, ಜನರ ಗಮನ ಸೆಳೆಯುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಗಾರೆಯಿಂದ ಮೂರ್ತಿ ನಿರ್ಮಿಸಲಾಗಿದ್ದು, ಹದಿನಾರು ಅಡಿ ಎತ್ತರವಿದೆ. ಮಹಿಷಾಸುರನ ಮೀಸೆ ಎದ್ದು ಕಾಣುತ್ತದೆ. ಒಂದು ಕೈಯಲ್ಲಿ ಸರ್ಪ, ಇನ್ನೊಂದು ಕೈಯಲ್ಲಿ ಕತ್ತಿಯನ್ನೂ ಹಿಡಿದಿದ್ದಾನೆ. ಇಂಥ ವಿಚಿತ್ರ, ವಿಕಾರ ರೂಪವೇ ವಿಶೇಷ ಎನಿಸುತ್ತದೆ. ಚಾಮುಂಡೇಶ್ವರಿ ದರ್ಶನಕ್ಕೂ ಮುನ್ನ ಮಹಿಷಾಸುರನ ವಿಶೇಷತೆ, ಇತಿಹಾಸದತ್ತ ಮೆಲುಕು ಹಾಕುತ್ತಾ ಪ್ರವಾಸಿಗರು ಹೆಜ್ಜೆ ಹಾಕುತ್ತಾರೆ. ಬೆಟ್ಟಕ್ಕೆ ಕಾಲಿಟ್ಟ ಆರಂಭದಲ್ಲಿ ಹಾಗೂ ಅಂತಿಮವಾಗಿ ಮಹಿಷಾಸುರನ ದರ್ಶನದೊಂದಿಗೆ ಭಕ್ತರು ಮರಳುತ್ತಾರೆ.

ಚಾಮುಂಡಿ ಬೆಟ್ಟಕ್ಕೆ ನಂದಿ ವಿಗ್ರಹ ವಿಶೇಷ ಕಳೆ ತಂದುಕೊಟ್ಟಿದೆ. ಚಾಮುಂಡಿ ಬೆಟ್ಟಕ್ಕೆ ಬಂದವರು ಒಮ್ಮೆ ನಂದಿಗೆ ನಮಿಸಿ ಮುನ್ನಡೆಯುತ್ತಾರೆ. ಬೆಟ್ಟವನ್ನು ಮೆಟ್ಟಿಲು ಮೂಲಕ ಹತ್ತುವಾಗ 800 ಮೆಟ್ಟಿಲು ತಲುಪುವ ವೇಳೆಗೆ ಬಸವನ ಆಕರ್ಷಕ ಮೂರ್ತಿ ಒಮ್ಮೆ ನಿಲ್ಲುವಂತೆ ಮಾಡುತ್ತದೆ. ದೊಡ್ಡದೇವರಾಜ ಒಡೆಯರ್ 1659ರಲ್ಲಿ ನಂದಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಕೆತ್ತನೆಗೆ ಗ್ರಾನೈಟ್ ಬಳಸಿದ್ದು, ಏಕಶಿಲೆಯಲ್ಲಿ ನಿರ್ಮಾಣವಾಗಿದ್ದು, 16 ಅಡಿಗಳ ಎತ್ತರವಿದೆ. ನಂದಿ ಕೊರಳಿನ ಸುತ್ತಲೂ ಕೆತ್ತಿರುವ ಗಂಟೆಗಳು ಆಕರ್ಷಕವಾಗಿವೆ. ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆಗಳು ನೆರವೇರುತ್ತವೆ. ಕೆಲ ವರ್ಷಗಳಿಂದ ಬಸವನ ಮೂರ್ತಿಗೆ ಅಭಿಷೇಕ ನಡೆಯುತ್ತಿದೆ. ಸಾರ್ವಜನಿಕರೇ ಸೇರಿಕೊಂಡು ಹಾಲು, ಜೇನು, ಅರಿಶಿಣ ಮೊದಲಾದ ದ್ರವ್ಯಗಳಿಂದ ನಂದಿಗೆ ಮಜ್ಜನ ನೆರವೇರಿಸುತ್ತಾ ಬಂದಿದ್ದಾರೆ. ಹಾಗಾಗಿ ಮೂರ್ತಿ ಇನ್ನಷ್ಟು ಕಂಗೊಳಿಸುತ್ತಿದೆ.

ಮೈಸೂರು ಅರಸರು ಬೇಸಿಗೆ ಸಮಯದಲ್ಲಿ ವಿಶ್ರಾಂತಿ ಪಡೆಯಲು ಬೆಟ್ಟದಲ್ಲಿ ಅರಮನೆಯೊಂದನ್ನು ನಿರ್ಮಿಸಿಕೊಂಡಿದ್ದರು. ಪುಟ್ಟದಾದ ಲಲಿತಾದ್ರಿ ಅರಮನೆ ಗಮನ ಸೆಳೆಯುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವಧಿಯಲ್ಲಿ ನಿರ್ಮಾಣ ಕಂಡಿದ್ದು, ಅರಸು ವಂಶಸ್ಥರು ಬೆಟ್ಟಕ್ಕೆ ಭೇಟಿ ನೀಡಿದ ಸಮಯದಲ್ಲಿ ತಂಗಿ, ವಿಶ್ರಾಂತಿ ಪಡೆದು ಮರಳುತ್ತಿದ್ದರು. ಈ ಭಾಗದಲ್ಲಿ ನಿಂತರೆ ಚಾಮುಂಡಿ ಬೆಟ್ಟ ಹಾಗೂ ಮೈಸೂರಿನ ಇತರ ಭಾಗಗಳನ್ನು ಕಣ್ತುಂಬಿಕೊಳ್ಳಬಹುದು.

## ಕೊಳಕು ತುಂಬಿದ ದೇವಿ ಕೆರೆ

ದೇವಿ ಕೆರೆ ಚಾಮುಂಡಿ ಬೆಟ್ಟದ ಮತ್ತೊಂದು ಆಕರ್ಷಣೆಯ ಕೇಂದ್ರವಾಗಿದೆ. ಈ ಕೆರೆ ಕಲ್ಯಾಣಿ ಸ್ವರೂಪದಲ್ಲಿ ಇದ್ದು, ಈಗ ಕೊಳಕು ನೀರು ತುಂಬಿಕೊಂಡಿದೆ. ನಿರ್ವಹಣೆ ಇಲ್ಲವಾಗಿದ್ದು, ಕೆರೆಗೆ ಭೇಟಿ ನೀಡಿದರೆ ಗಬ್ಬು ವಾಸನೆಯ ಕೊಳಚೆ ನೀರು ಸ್ವಾಗತಿಸುತ್ತದೆ. ಬೆಟ್ಟದ ಮೇಲಿನ ಜನತೆ ಈ ಕೆರೆಯನ್ನು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು ಬಳಸುತ್ತಿದ್ದಾರೆ.

ಸದಾ ನೀರು ನಿಲ್ಲುವುದರಿಂದ ಕೊಳಚೆಯಾಗಿರುವ ಇದನ್ನು ಸ್ವಚ್ಛಗೊಳಿಸಿ ಶಾಶ್ವತ ನಿರ್ವಹಣೆಗೆ ಹೊಸ ದಾರಿಗಳನ್ನು ಕಂಡುಕೊಳ್ಳಬೇಕಿದೆ. ಕೆರೆಯಲ್ಲಿ ದೋಣಿ ವಿಹಾರ ಪ್ರಾರಂಭಿಸಿದರೆ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬಹುದು. ಈ ಕೆರೆಗೆ ಕಾಯಕಲ್ಪ ನೀಡಿದರೆ ಬೆಟ್ಟದ ಆಕರ್ಷಣೆಯ ಕೇಂದ್ರ ಬಿಂದುವಾಗಲಿದೆ ಎಂಬುದು ಪ್ರವಾಸಿಗರ ಅಭಿಪ್ರಾಯವಾಗಿದೆ.

ಕನ್ನಡ ಹಾಗೂ ಇತರ ಭಾಷೆಗಳ ಚಲನಚಿತ್ರಗಳ ಚಿತ್ರೀಕರಣ ಬೆಟ್ಟದಲ್ಲಿ ಸಾಮಾನ್ಯ. ಬೆಟ್ಟದ ಒಂದಿಲ್ಲೊಂದು ಭಾಗದಲ್ಲಿ ಚಿತ್ರೀಕರಣ ನಡೆಯುವುದು ಕಾಣಸಿಗುತ್ತದೆ. ಕೆಲ ಕನ್ನಡ ಚಿತ್ರಗಳಲ್ಲಿ ಚಾಮುಂಡೇಶ್ವರಿಯನ್ನು ಸ್ತುತಿಸುವ ಹಾಡುಗಳಿವೆ. ಕನ್ನಡ ಸೇರಿದಂತೆ ದಕ್ಷಿಣ ಭಾಷೆಗಳ ನೂರಾರು ಚಿತ್ರಗಳಲ್ಲಿ ಚಾಮುಂಡೇಶ್ವರಿ ಬೆಟ್ಟದ ದೃಶ್ಯಗಳನ್ನು ನೋಡಬಹುದು. ಮೈಸೂರು ಭಾಗದಲ್ಲಿ ಸಿನಿಮಾ ಚಿತ್ರೀಕರಣ ನಡೆಸುವವರು ಚಾಮುಂಡಿಯತ್ತ ಒಂದು ಕಣ್ಣು ಹಾಯಿಸಿಯೇ ಇರುತ್ತಾರೆ. ಬೆಟ್ಟಕ್ಕೆ ಹೊಂದಿಕೊಂಡಿರುವ ಸುತ್ತಮುತ್ತಲಿನ ಸುಂದರ ತಾಣಗಳು ಚಿತ್ರೀಕರಣಕ್ಕೆ ಹೇಳಿಮಾಡಿಸಿದಂತಿವೆ.

ಈಗಾಗಲೆ ಚಾಮುಂಡಿಬೆಟ್ಟದ ಪ್ರದೇಶವನ್ನೂ ಒಳಗೊಂಡಂತೆ ಮೈಸೂರು ನಗರದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ದಿನಗಳು ಕಳೆದಂತೆ ಪ್ಲಾಸ್ಟಿಕ್ ಬಳಕೆ ತಗ್ಗಿದ್ದು, ಬೆಟ್ಟಕ್ಕೆ ಪ್ಲಾಸ್ಟಿಕ್ ಕೊಂಡೊಯ್ಯುವವರ ಸಂಖ್ಯೆ ಕಡಿಮೆಯಾಗಿದೆ. ಬೆಟ್ಟದ ಮೇಲಿರುವ ಅಂಗಡಿ ಮಳಿಗೆಗಳಲ್ಲೂ ಈಗ ಪ್ಲಾಸ್ಟಿಕ್ ಬಳಸುತ್ತಿಲ್ಲ. ಪ್ಲಾಸ್ಟಿಕ್ ಮುಕ್ತ ಪರಿಸರವಾಗಿ ಬೆಟ್ಟ ಗಮನ ಸೆಳೆದಿದೆ. ಇದೇ ಮಾದರಿಯ ಬಿಗಿಯಾದ ಕ್ರಮ ಹಾಗೂ ಈಗಿನ ವ್ಯವಸ್ಥೆ ಮುಂದುವರಿದರೆ ಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಸಂಪೂರ್ಣ ಸ್ಥಗಿತಗೊಳ್ಳಲಿದೆ.

ಆದರೆ ಬೆಟ್ಟದ ಮೇಲೆ ವಾಹನಗಳ ದಟ್ಟಣೆ ಆಗದಂತೆ ತಡೆಯುವುದು ಹೇಗೆ? ಬೆಟ್ಟಕ್ಕೆ ಕೇಬಲ್ ಕಾರ್ ವ್ಯವಸ್ಥೆ ಮಾಡಿದರೆ ಅದು ಪರಿಣಾಮಕಾರಿ ಎನ್ನುವ ವಾದ ಬಲವಾದದ್ದೇ. ಆದರೆ ಇದರಿಂದ ಬೆಟ್ಟದ ಪರಿಸರ ನಾಶವಾಗುತ್ತದೆ ಎನ್ನುತ್ತಾರೆ ಪರಿಸರಪ್ರೇಮಿಗಳು. ಅಭಿವೃದ್ಧಿ ಮತ್ತು ಸಂಸ್ಕೃತಿ ರಕ್ಷಣೆಯ ಮಧ್ಯೆ ಸುರಕ್ಷಿತ ಗೆರೆಯೊಂದನ್ನು ಹುಡುಕಿಕೊಂಡು ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲವೆ? ■




ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY
ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ